**APRIL 23, 2024**

**ALL INDIA RADIO- DHARWAD**

**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ರಾಜ್ಯಕ್ಕೆ ಬರ ಪರಿಹಾರ ಬಿಡುಗಡೆ; ಒಂದು ವಾರದೊಳಗೆ ಕ್ರಮ ಕೇಂದ್ರ ಸರ್ಕಾರದಿಂದ ಸುಪ್ರೀಂ ಕೋರ್ಟ್‌ಗೆ ಹೇಳಿಕೆ – ಮುಖ್ಯಮಂತ್ರಿ ಸಿದ್ದರಾಮಯ್ಯ.**
- **ರಾಜ್ಯದ 2ನೇ ಹಂತದ ಲೋಕಸಭಾ ಚುನಾವಣೆ; 227 ಅಭ್ಯರ್ಥಿಗಳು ಕಣದಲ್ಲಿ; ನಾಮಪತ್ರ ಹಿಂಪಡೆದ 45 ಅಭ್ಯರ್ಥಿಗಳು.**
- **ವಿವಿಧ ಕ್ಷೇತ್ರಗಳ ಅನನ್ಯ ಸಾಧಕರಿಗೆ, ರಾಷ್ಟ್ರಪತಿಗಳಿಂದ, ಪದ್ಮ ಪ್ರಶಸ್ತಿಗಳ ಪ್ರದಾನ.**
- **ಇಂದು ಹನುಮಾನ್ ಜಯಂತಿ. ನಾಡಿನಾದ್ಯಂತ ಆಂಜನೇಯ ದೇಗುಲಗಳಲ್ಲಿ ವಿಶೇಷ ಪೂಜಾ ಕೈಂಕರ್ಯ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯಕ್ಕೆ ಬರ ಪರಿಹಾರ ಬಿಡುಗಡೆ ಸಂಬಂಧ, ಒಂದು ವಾರದೊಳಗೆ ಕ್ರಮ ತೆಗೆದುಕೊಳ್ಳುವುದಾಗಿ, ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪ್ರಕಟಿಸಿದ್ದಾರೆ. ಪರಿಹಾರ ಬಿಡುಗಡೆಗೆ**

ಚುನಾವಣಾ ಆಯೋಗ ಕೂಡ ಸಮ್ಮತಿಸಿದೆ ಎಂದು ಕೇಂದ್ರ ಸರ್ಕಾರದ ಅಟಾರ್ನಿ ಜನರಲ್ ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ನಾಡಿನ ರೈತರಿಗೆ ಸಿಗಬೇಕಿದ್ದ ನ್ಯಾಯಯುತ ಪರಿಹಾರವನ್ನು ನೀಡಲು, ಸಾಧ್ಯವಾಗಲಿದೆ ಎಂದು, ಮುಖ್ಯಮಂತ್ರಿ ತಿಳಿಸಿದ್ದಾರೆ.

<><><>

ಕೇಂದ್ರ ಸರ್ಕಾರ ಒಕ್ಕೂಟ ವ್ಯವಸ್ಥೆಯ ನಿಯಮ ಪಾಲಿಸಲಿ ಎಂದು, ಕಾನೂನು ಖಾತೆ ಸಚಿವ ಎಚ್.ಕೆ.ಪಾಟೀಲ್, ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ ಆಗ್ರಹಿಸಿದ್ದಾರೆ.

<><><>

ರಾಜ್ಯದಲ್ಲಿ 2ನೇ ಹಂತದ ಲೋಕಸಭಾ ಚುನಾವಣೆ, ಮೇ 7ರಂದು ನಡೆಯಲಿದ್ದು, ಅಂತಿಮವಾಗಿ 227 ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದಾರೆ. 14 ಲೋಕಸಭಾ ಕ್ಷೇತ್ರಗಳ ಚುನಾವಣೆಗೆ ನಾಮಪತ್ರ ಹಿಂಪಡೆಯಲು, ನಿನ್ನೆ ಕೊನೆ ದಿನವಾಗಿತ್ತು. 45 ಜನ ಅಭ್ಯರ್ಥಿಗಳು ನಾಮಪತ್ರಗಳನ್ನು ಹಿಂಪಡೆದಿದ್ದಾರೆ. 335 ಅಭ್ಯರ್ಥಿಗಳು ಒಟ್ಟು 503 ನಾಮಪತ್ರಗಳನ್ನು ಸಲ್ಲಿಸಿದ್ದರು. 394 ನಾಮಪತ್ರಗಳು ಕ್ರಮ ಬದ್ಧವಾಗಿದ್ದವು. 109 ನಾಮಪತ್ರಗಳು ತಿರಸ್ಕೃತಗೊಂಡವು. ಅಂತಿಮವಾಗಿ 206 ಜನ ಪುರುಷರು, 21 ಜನ ಮಹಿಳೆಯರು ಸೇರಿದಂತೆ 227 ಜನ ಕಣದಲ್ಲಿದ್ದಾರೆ. 14 ಲೋಕಸಭಾ ಕ್ಷೇತ್ರಗಳ ಪೈಕಿ, ದಾವಣಗೆರೆಯಲ್ಲಿ ಅತೀ ಹೆಚ್ಚು 25 ಪುರುಷರು ಹಾಗೂ ಐವರು ಮಹಿಳೆಯರು ಸೇರಿ 30 ಜನ ಕಣದಲ್ಲಿದ್ದಾರೆ.

<><><>

ಅತಿ ಕಡಿಮೆ ವಿಜಯಪುರ ಹಾಗೂ ರಾಯಚೂರು ಲೋಕಸಭಾ ಕ್ಷೇತ್ರಗಳಲ್ಲಿ ತಲಾ 8 ಮಂದಿ ಸ್ಪರ್ಧಾ ಕಣದಲ್ಲಿದ್ದಾರೆ.

<><><>

14 ಕ್ಷೇತ್ರಗಳಲ್ಲಿ ಒಟ್ಟು 21 ಮಹಿಳಾ ಅಭ್ಯರ್ಥಿಗಳು ಚುನಾವಣೆಗೆ ಸ್ಪರ್ಧಿಸಿದ್ದು, ಬೆಳಗಾವಿ, ಬೀದರ್, ಬಳ್ಳಾರಿ, ಧಾರವಾಡ ಲೋಕಸಭಾ ಕ್ಷೇತ್ರಗಳಲ್ಲಿ ಮಹಿಳಾ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿಲ್ಲ.

<><><>

ಯಾದಗಿರಿ ಜಿಲ್ಲೆ, ಸುರಪುರ ವಿಧಾನಸಭಾ ಪರಿಶಿ ್ಟ ಪಂಗಡ ಅಭ್ಯರ್ಥಿ ಮೀಸಲು ಕ್ಷೇತ್ರದ ಉಪ ಚುನಾವಣೆಯಲ್ಲಿ, ಅಂತಿಮವಾಗಿ **6** ಜನ ಅಭ್ಯರ್ಥಿಗಳು ಕಣದಲ್ಲಿದ್ದಾರೆ ಎಂದು, ಸುರಪುರ ವಿಧಾನಸಭಾ ಚುನಾವಣಾಧಿಕಾರಿ ಕಾವ್ಯರಾಣಿ ಕೆ.ವಿ. ತಿಳಿಸಿದ್ದಾರೆ.

<><><>

**18**ನೇ ಲೋಕಸಭೆ ಸಾರ್ವತ್ರಿಕ ಚುನಾವಣೆ, ಮಾದರಿ ನೀತಿ ಸಂಹಿತೆ ಅಡಿ, ಮತದಾರರ ಸಹಾಯವಾಣಿ ಮೂಲಕ, ಸಾರ್ವಜನಿಕ ಕುಂದುಕೊರತೆಗಳಿಗೆ ಸಂಬಂಧಿಸಿ, ಇದು ವರೆಗೆ **25** ಸಾವಿರದ **164** ಕರೆಗಳನ್ನು ಸ್ವೀಕರಿಸಲಾಗಿದೆ. ಎಲ್ಲ ಕರೆಗಳನ್ನೂ ವಿಲೇವಾರಿ ಮಾಡಲಾಗಿದೆ, ಎಂದು ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ತಿಳಿಸಿದೆ.

<><><>

ಶುಕ್ರವಾರ ಇದೇ **26** ರಂದು ನಡೆಯಲಿರುವ, ರಾಜ್ಯದ ಪ್ರಥಮ ಹಂತದ **14** ಕ್ಷೇತ್ರಗಳ ಲೋಕಸಭೆ ಚುನಾವಣೆಯಲ್ಲಿ, ಈ ಬಾರಿ ಪ್ರಥಮ ಬಾರಿಗೆ ಗಣನೀಯ ಸಂಖ್ಯೆಯ ಯುವ ಜನರು ಮತ ಚಲಾಯಿಸುತ್ತಿದ್ದಾರೆ. ಚುನಾವಣಾ ಆಯೋಗದ ವಿಶೇಷ ಪ್ರಯತ್ನಗಳ ಹಿನ್ನೆಲೆ, ಈ ವರೆಗೆ ಅರ್ಹ ವಯಸ್ಸಿನ ಯುವ ಮತದಾರರು ತಮ್ಮ ಹೆಸರನ್ನು, ಮತದಾರರ ಪಟ್ಟಿಯಲ್ಲಿ ದಾಖಲಾರ್ಹವಾಗಿ ನಮೂದಿಸಿದ್ದಾರೆ. ಮಂಗಳೂರಿನ ರಥಬೀದಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ, ಗೀತಾ ಪ್ರಥಮ ಬಾರಿಗೆ ತಮ್ಮ ಮತ ಚಲಾಯಿಸುತ್ತಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಗೀತಾ ಧ್ವನಿ **40**ಸೆಕೆಂದುಗಳು

<><><>

ಭಾರತ ಚುನಾವಣಾ ಆಯೋಗದ, ಆಚಾರ್ಯ ತರಬೇತುದಾರರಾಗಿ, ದೇಶಾದ್ಯಂತ ಸಂಚರಿಸಿ, ವರ್ಷವಿಡೀ ಚುನಾವಣಾಧಿಕಾರಿಗಳನ್ನು ತರಬೇತುಗೊಳಿಸಿದ, ಕಲಬುರಗಿ ಜಿಲ್ಲೆ ಸೇಡಂನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ, ಇತಿಹಾಸ ಪ್ರಾಧ್ಯಾಪಕ ಡಾಕ್ಟರ್ ಶಶಿಶೇಖರ ರೆಡ್ಡಿ ಅವರು, ಕಡ್ಡಾಯ ಮತದಾನದ ಮಹತ್ವ ಕುರಿತು, ಪ್ರದೇಶ ಸಮಾಚಾರಕ್ಕಾಗಿ ವಿವರಿಸಿದ್ದಾರೆ.

<><><>

ಡಾ. ಶಶಿಶೇಖರ್ ರೆಡ್ಡಿ ಧ್ವನಿ **45** ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ರಾಷ್ಟ್ರಪತಿ ಭವನದಲ್ಲಿ, ವಿವಿಧ ಕ್ಷೇತ್ರಗಳ ಸಾಧಕರಿಗೆ, ಪದ್ಮ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಭರತನಾಟ್ಯ ಕಲಾವಿದೆ ಡಾಕ್ಟರ್ ಪದ್ಮಾ ಸುಬ್ರಮಣ್ಯಂ ಅವರಿಗೆ ಪದ್ಮ ವಿಭೂಷಣ, ಸೀತಾರಾಮ ಜಿಂದಾಲ್ ಅವರಿಗೆ ಪದ್ಮ ಭೂಷಣ, ರೋಹನ ಬೋಪಣ್ಣ, ಡಾಕ್ಟರ್ ಸಿ.ಆರ್.ಚಂದ್ರಶೇಖರ್, ಡಾಕ್ಟರ್ ಪ್ರೇಮಾ ಧನರಾಜ್ ಸೇರಿದಂತೆ ಹಲವರಿಗೆ, ಪದ್ಮಶ್ರೀ ಪ್ರಶಸ್ತಿ ನೀಡಿ, ಗೌರವಿಸಲಾಯಿತು.

<><><>

ಮೂಲತಃ ರಾಯಚೂರು ಜಿಲ್ಲೆ ಅರಕೇರಾ ಗ್ರಾಮದವರಾದ, ಕವಿ ಆರಿಫ್ ರಾಜಾ, ಕೋಲ್ಕತ್ತಾದ ಭಾರತೀಯ ಭಾಷಾ ಪರಿಷತ್ ನೀಡುವ, ಪ್ರತಿಷ್ಠಿತ 'ಯುವ ಪುರಸ್ಕಾರ ಸಮ್ಮಾನ್'ಕ್ಕೆ ಭಾಜನರಾಗಿದ್ದಾರೆ. ಬಾಗಲಕೋಟೆ ಜಿಲ್ಲೆ ಇಳಕಲ್‌ನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ, ಕನ್ನಡ ಭಾಷೆಯ ಸಹಾಯಕ ಪ್ರಾಧ್ಯಾಪಕರಾಗಿದ್ದಾರೆ. ಇದಕ್ಕೂ ಮೊದಲು ಪ್ರಾಥಮಿಕ ಶಾಲೆ ಶಿಕ್ಷಕರಾಗಿ 10 ವರ್ಷ ಸೇವೆ ಸಲ್ಲಿಸಿದ್ದಾರೆ. ಖ್ಯಾತ ಬಂಗಾಲಿ ಲೇಖಕ ರಾಮಕುಮಾರ್ ಮುಖ್ಯೋಪಾಧ್ಯಾಯ, ಮಲಯಾಳಂನ ಹಿರಿಯ ಲೇಖಕ ಎಂ. ಮುಕುಂದನ್, ಭಾರತೀಯ ಪರಿಷದ್‌ನ ಸದಸ್ಯೆ ಪೂಜಾ ಅವರಿಂದ, ಪ್ರಶಸ್ತಿ ಸ್ವೀಕರಿಸಿರುವ, ಯುವ ಕವಿ ಆರೀಫ್ ರಾಜಾ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಹರ್ಷವನ್ನು ವ್ಯಕ್ತ ಪಡಿಸಿದ್ದಾರೆ.

<><><>

ಆರೀಫ್ ರಾಜಾ ಧ್ವನಿ 45 ಸೆಕೆಂದುಗಳು

<><><>

ಇಂದು ಹನುಮಾನ್ ಜಯಂತಿ. ಚೈತ್ರ ಮಾಸದ ಶುಕ್ಲ ಪಕ್ಷದ 15ನೇ ದಿನದಂದು, ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುತ್ತದೆ. ಇಂದು ಬೆಳಗ್ಗೆ 6.15ಕ್ಕೆ ತೊಟ್ಟಿಲೋತ್ಸವ ನೆರವೇರಿದೆ. ಹನುಮನುದಿಸಿದ ನಾಡು, ವಿಜಯನಗರ ಜಿಲ್ಲೆ, ಹಂಪಿ ಬಳಿಯ ಕಿಷ್ಕಿಂಧೆಯ, ಸುಮೇರು ಪರ್ವತ ಪ್ರದೇಶದಲ್ಲಿ, ಇಂದು ವಿಜೃಂಭಣೆಯ ಪೂಜಾ ಕೈಂಕರ್ಯ ನೆರವೇರುತ್ತಿವೆ. ಧಾರವಾಡದ ಲೈನ ಬಜಾರ್ ಹನುಮಾನ್ ದೇಗುಲ, ಪ್ರಸಿದ್ಧ ನುಗ್ಗಿಕೇರಿ ಆಂಜನೇಯ

ದೇಗುಲಗಳು ಸೇರಿದಂತೆ, ರಾಜ್ಯದ ಎಲ್ಲ ಹನುಮ ದೇಗುಲಗಳಿಗೆ ಸುಂದರ ದೀಪಾಲಂಕಾರ ಮಾಡಲಾಗಿತ್ತು.

<><><>

ರಾಜ್ಯದ ಬಹುತೇಕ ಕಡೆ ಮಳೆ ಕ್ಷೀಣಿಸಿದ್ದು, ಸೋಮವಾರ 16 ಜಿಲ್ಲೆಗಳಲ್ಲಿ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ಗಡಿ ದಾಟಿದೆ. ಮುಂದಿನ 5 ದಿನಗಳ ವರೆಗೆ, ರಾಜ್ಯದ 15 ಜಿಲ್ಲೆಗಳಲ್ಲಿ ಬಿಸಿ ಗಾಳಿ ಬೀಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆ, ಮುನ್ನೆಚ್ಚರಿಕೆ ನೀಡಿದೆ. ರಾಯಚೂರಿನಲ್ಲಿ ಅತಿ ಹೆಚ್ಚು 44 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ, ಯಾದಗಿರಿ 43 ದಶಾಂಶ 3, ಕೊಪ್ಪಳ 43, ಬಳ್ಳಾರಿ 42 ಹಾಗೂ ಬೀದರ್‌ನಲ್ಲಿ 41 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

<><><>

ದಕ್ಷಿಣಕನ್ನಡ, ಉಡುಪಿ, ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಗದಗ್, ಕೊಡಗು, ಹಾಸನ, ಮೈಸೂರು ಹಾಗೂ ಮಂಡ್ಯದಲ್ಲಿ ಮುಂದಿನ 24 ಗಂಟೆ ಸಾಧಾರಣ ಮಳೆಯಾಗುವ ಸಂಭವವಿದೆ.

<><><>

ಕೊಪ್ಪಳ, ಕಲಬುರಗಿ ಹಾಗೂ ಬೀದರ್ ಜಿಲ್ಲೆಗಳಲ್ಲಿ ನಾಲ್ವರು ಸಿಡಿಲು ಬಡಿದು, ಮೃತಪಟ್ಟಿದ್ದಾರೆ.

<><><>

ಕೊಪ್ಪಳ ತಾಲೂಕಿನ ಇರಕಲಗಡ ಗ್ರಾಮದಲ್ಲಿ ಒಂದು ಎತ್ತು, ಏಳು ಕುರಿಗಳು ಹಾಗೂ ಬೀದರ್ ಜಿಲ್ಲೆ ಔರಾದನಲ್ಲಿ ಎರಡು ಎತ್ತುಗಳು ಸಿಡಿಲಿಗೆ ಬಲಿಯಾಗಿವೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಜಾಗತಿಕ ಭೂ ದಿನವನ್ನು ಆಚರಿಸಲಾಯಿತು. ಪ್ಲಾಸ್ಟಿಕ್ ವಿರುದ್ಧ ಭೂ ಗ್ರಹ ಎಂಬುದು, ಪ್ರಸಕ್ತ ವರ್ಷದ ಜಾಗತಿಕ ಭೂಮಿ ದಿನಾಚರಣೆಯ ಧ್ಯೇಯವಾಕ್ಯ.

<><><>

ಹಾವೇರಿ ಜಿಲ್ಲೆ ಸವಣೂರ ತಾಲೂಕು, ಕಾರಡಗಿಯ ಶ್ರೀ ವೀರಭದ್ರೇಶ್ವರ ರಥೋತ್ಸವ ಇಂದು ಮಂಗಳವಾರ ಹಾಗೂ ನಾಳೆ, 24ನೇ ತಾರೀಖು ಬುಧವಾರ ಕಡುಬಿನ ಕಾಳಗ ಆಯೋಜಿತವಾಗಿದೆ.

<><><>

ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲೂಕಿನ, ವಿದುರಾಶ್ವತ್ಥ ಕ್ಷೇತ್ರದ ಜಾತ್ರಾ ಮಹೋತ್ಸವ ಮತ್ತು ಬ್ರಹ್ಮ ರಥೋತ್ಸವ, ಇಂದು ವಿಜೃಂಭಣೆಯಿಂದ ನೆರವೇರಲಿದೆ.

<><><>

ಇಂದು ಸಂಜೆ ಬೆಂಗಳೂರಿನಲ್ಲಿ, ಬಿಜೆಪಿ ಹಿರಿಯ ನಾಯಕ ಅಮಿತ್ ಶಾ ಮಾರ್ಗ ಪ್ರದರ್ಶನ ನಡೆಸಲಿದ್ದಾರೆ.

<><><>

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾಧ್ರಾ, ಇಂದು ಬೆಂಗಳೂರಿನಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಗವಹಿಸಲಿದ್ದಾರೆ.

<><><>

ಮೈಸೂರಿನ ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗ, ಧಾರವಾಡ ಆಕಾಶವಾಣಿ ಸಹಯೋಗದಲ್ಲಿ ಆಯೋಜಿಸಿದ, ಪೌಷ್ಟಿಕಾಂಶ ಅರಿವು ಅಭಿಯಾನ ಹಾಗೂ 'ಸಿರಿ ಸಂಪದ' ಕಾರ್ಯಕ್ರಮದ ರಸಪ್ರಶ್ನೆ ವಿಜೇತರಿಗೆ, ಇಂದು ಸಂಜೆ 4.30ಕ್ಕೆ ಧಾರವಾಡದ 'ದೇಸಿ ಅಂಗಡಿ' ಯಲ್ಲಿ ಬಹುಮಾನ ಪ್ರದಾನ ಸಮಾರಂಭ ಆಯೋಜಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರಾಜ್ಯಕ್ಕೆ ಬರ ಪರಿಹಾರ ಬಿಡುಗಡೆ; ಒಂದು ವಾರದೊಳಗೆ ಕ್ರಮ ಕೇಂದ್ರ ಸರ್ಕಾರದಿಂದ ಸುಪ್ರೀಂ ಕೋರ್ಟ್‌ಗೆ ಹೇಳಿಕೆ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ರಾಜ್ಯದ 2ನೇ ಹಂತದ ಲೋಕಸಭಾ ಚುನಾವಣೆ; 227 ಅಭ್ಯರ್ಥಿಗಳು ಕಣದಲ್ಲಿ; ನಾಮಪತ್ರ ಹಿಂಪಡೆದ 45 ಅಭ್ಯರ್ಥಿಗಳು.
- ವಿವಿಧ ಕ್ಷೇತ್ರಗಳ ಅನನ್ಯ ಸಾಧಕರಿಗೆ, ರಾಷ್ಟ್ರಪತಿಗಳಿಂದ, ಪದ್ಮ ಪ್ರಶಸ್ತಿಗಳ ಪ್ರದಾನ.
- ಇಂದು ಹನುಮಾನ್ ಜಯಂತಿ. ನಾಡಿನಾದ್ಯಂತ ಆಂಜನೇಯ ದೇಗುಲಗಳಲ್ಲಿ ವಿಶೇಷ ಪೂಜಾ ಕೈಂಕರ್ಯ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ